# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ ಯುವ ಕೃಷಿ ಮಹಿಳೆ

## ಆವಿಷ್ಕಾರ ಮಾಡಿದ ಯುವ ಕೃಷಿ ಮಹಿಳೆ



**ಶ್ರೀಮತಿ ರೇಖಾ ಶಿವಕುಮಾರ ಶಿಡಗನಾಳ**
ಗ್ರಾಮ: ಕಾಕೋಳ
ತಾ: ರಾಣೇಬೆನ್ನೂರು
ಜಿ: ಹಾವೇರಿ ಮೊ: 9008888795

ಆರ್ಥಿಕವಾಗಿ ಉತ್ತಮವಿರುವ ಸಂದರ್ಭಗಳಲ್ಲಿ ಕೃಷಿ ಕುಟುಂಬದ ಹೆಣ್ಣು ಮಕ್ಕಳು ಹೊಲಗಳಿಗೆ ಹೋಗಿ ಕೆಲಸ ಮಾಡುವುದೇ ವಿರಳ ಇಂತಹ ಸಂದರ್ಭಗಳಲ್ಲಿಯೂ ರಾಣೇಬೆನ್ನೂರು ತಾಲ್ಲೂಕಿನ ಶ್ರೀಮತಿ ರೇಖಾ ಶಿವುಕುಮಾರ ಶಿಡಗನಾಳ ಇವರು ಕೃಷಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ತಮ್ಮ 11.30 ಎಕರೆ ಜಮೀನಿನಲ್ಲಿ ಹತ್ತಿ, ಮೆಕ್ಕೆಜೋಳ ಹಾಗೂ ತರಕಾರಿ ಬೇಸಾಯವನ್ನೂ ರೂಢಿಸಿಕೊಂಡು ಬಂದಿದದು ಕೃಷಿ ಲಾಭದಾಯಕ ಎಂಬುದನ್ನು ದೃಢಪಡಿಸಿದ್ದಾರೆ. ಬಹು ಬೆಳೆಗಳಾದ ಹೆಸರು, ಶೇಂಗಾ, ಕಡಲೆ, ಕ್ಯಾಬೇಜ್ ಮತ್ತು ಅಂತರ ಬೆಳೆಯಾದ ಅಲಸಂದಿ, ಬೀನ್ಸ್, ಅವರೆ, ರಾಗಿ, ಜೋಳ, ನವಣೆ, ಸಾವಿ ಮುಂತಾದ ಬೆಳೆಗಳನ್ನು ಇವರು ಕೃಷಿಯಲ್ಲಿ ಬೆಳೆಯುತ್ತಿದ್ದು ಜಮೀನಿನ ಸುತ್ತ ತೇಗು, ಸಾಗವಾನಿ, ಕರಿಬೇವು ಗಿಡಗಳನ್ನು ಹಾಕಿದ್ದಾರೆ. ಎರೆಹುಳು ತೊಟ್ಟಿ ಮತ್ತು ಇಂಗು ಹೊಮಡ ಸಹ ಹೊಂದಿದ್ದಾರೆ. ಕೃಷಿ ಬೇಸಾಯದಲ್ಲಿ ವರ್ಷಕ್ಕೆ ಸುಮಾರು 1 ಲಕ್ಷದಿಂದ 2 ಲಕ್ಷದವರೆಗೂ ಆದಾಯ ಪಡೆಯುವರು. ತರಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಸರಬರಾಜು ಸಹ ಮಾಡುತ್ತಾರೆ ಮತ್ತು ರಸಗೊಬ್ಬರದ ಜೊತೆಗೆ ಸಾವಯವ ಕೃಷಿಯತ್ತ ಒಲವು ಮೂಡಿಸುವ ಮಹತ್ತರ ಕೆಲಸ ಮಾಡುತ್ತಿದ್ದಾರೆ.